

ಟಿಬೆಟನ್ ಶಿಬಿರದಲ್ಲಿ...

ಮನೆ ಬಾಗಿಲಿನ ಮೇಲೆ ಹೊಸವರ್ಷದ ಶುಭಾಶಯ.
ಟಿಬೆಟಿನಲ್ಲಿ ವಸಂತ ಶುರುವಾಗುವುದು ಯಾವಾಗ?



ತೆವಳುತ್ತ ಸಾಗುತ್ತಿತ್ತು. ಇಂಥ ದುರ್ಗಮ ದಾರಿಯಲ್ಲಿ 10–15 ಕಿಲೋಮೀಟರಿನ ಸುತ್ತು ದಾರಿಯನ್ನು ಸವೆಸಿ ಸಿಲಿಗುರಿಗೆ ಹೋಗಿ ಗ್ಯಾಂಗ್‌ಟಾಕ್‌ಗೆ ತಲಪುವುದು ಆಗದ ಮಾತು ಎಂದು ನಾನು ಅರೆ ನಿದ್ರೆ, ಅರೆ ಎಚ್ಚರದಲ್ಲಿ ಸುಮ್ಮನಾಗಿಬಿಟ್ಟಿದ್ದೆ. ಯಾವುದೋ ಊರಿನಲ್ಲಿ ನೆಲೆಸಿ ಇನ್ನಾವುದೋ ಊರಿನ ಕನಸುಗಳನ್ನು ಮನಸಿನಲ್ಲಿ ಚಿಗುರಿಸಿದ ಅಶ್ರಫಿಯವರ ನೆನಪು ಮಾತ್ರ ನಮ್ಮ ಸಿಕ್ಕಿಂ ಪ್ರವಾಸದ ಉದ್ದಕ್ಕೂ ಎಡೆಬಿಡದೆ ಕಾಡುತ್ತಲೇ ಇತ್ತು.

ಎಲ್ಲಿಯೋ ಹುಟ್ಟಿ ಇನ್ನೆಲ್ಲಿಯೋ ಬದುಕುತ್ತಾ ಇನ್ನೇನನ್ನೋ ಕನವರಿಸುತ್ತಾ ಜೀವನ ಸವೆಸುವುದು ನಮ್ಮ ಸಾಮೂಹಿಕ ವಿಧಿಯೇನೋ?

ಗ್ಯಾಂಗ್‌ಟಾಕ್‌ನಲ್ಲಿ ಎಲ್ಲಿ ಹೋದರೂ ಅಲ್ಲಿಂದ ಕಾಂಚನಜುಂಗಾ ಪರ್ವತಗಳನ್ನು ಕಾಣಬಹುದೋ ಇಲ್ಲವೋ ಎಂಬುದು ನಮ್ಮೆದಿರು ಮೃಗಜಲದಂತೆ ಕಾಡುವ ಪ್ರಶ್ನೆಯಾಗಿತ್ತು. ಗ್ಯಾಂಗ್‌ಟಾಕಿನ ತಾಶಿ ಪಾಯಿಂಟ್ ಮೇಲಿಂದ ಕಾಂಚನಜುಂಗಾ ಪರ್ವತ ಶ್ರೇಣಿಗಳನ್ನು ನೋಡಬಹುದು ಎಂದು ಎಲ್ಲರೂ ಹೇಳಿದರೆ, ನಮ್ಮ ಡ್ರೈವರ್ ಬಹಳ ತಾತ್ಸಾರದಿಂದ ನಕ್ಕು 'ಅಲ್ಲಿಂದ ಕಾಣುವುದು ಪರ್ವತದ ಕಪ್ಪು ಪರದೆಗಳೇ ಹೊರತು ಇನ್ನೇನೂ ಅಲ್ಲ' ಅಂದ. ಅವನನ್ನು ಪುಸಲಾಯಿಸಿ ಗುಡ್ಡದ ಮೇಲಿದ್ದ ತಾಶಿ ಪಾಯಿಂಟಿನಿಂದ ನೋಡಿದರೆ ಬರೀ ಮೋಡಗಳ, ಕಪ್ಪು ಕಮರಿಗಳ ರಾಶಿಯೇ ಹೊರತು ಇನ್ನೇನೂ ಇರಲಿಲ್ಲ. ನಾನಂತೂ ಸಾಹಸ ಮಾಡಿ, ವಿಶೇಷ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳು, ಗವರ್ನರ್‌ಗಳು ಬಹು ವಿರಾಜಮಾನರಾಗಿ ಟೆಲಿಸ್ಕೋಪಿನಿಂದ ನೋಡುವ ತಾಕಿನಿಂದ, ಅದರ ಮೇಲಿರುವ ಮಾಡಿನ ಟೇಕಿನಿಂದ ನೋಡುವ ಪ್ರಯತ್ನ ಮಾಡಿದರೂ ನನಗೆ ಕಂಡಿದ್ದು ಭೋರನೆ ಸಾಗುವ ಮೋಡಗಳ ಮಂದಗಮನ.

ನಾವು ಬೆಳಿಗ್ಗೆ ತೀಸ್ತಾ ನದಿಯ ಆಳ ಕಂದಕದಲ್ಲಿ ಉಸಿರು ಬಿಗಿಹಿಡಿದು ನೋಡಿದ, ಗಂಭೀರವಾಗಿ ತೆವಳುತ್ತಿದ್ದ ಹೆಬ್ಬಲೆಗಳಿಗೂ ಆಕಾಶದಲ್ಲಿ ಕದಲುತ್ತಿದ್ದ ಮೋಡಗಳ ಹೆಮ್ಮಾಲೆಗಳಿಗೂ ಹೆಚ್ಚು ಅಂತರವಿರಲಿಲ್ಲ. ನಂತರ ಅಲ್ಲಿಂದ ಪೀಲಿಂಗ್‌ನ ಹೋಟೆಲಿನ ಕೋಣೆಯಿಂದ ಹೊರಗೆ ಇಣುಕಿದರೆ, ನಾಸ್ಟಾ ಮಾಡುವ ಡೈನಿಂಗ್ ಟೇಬಲಿನ ಬಳಿಯಿಂದ ನೋಡಿದರೆ, ಕಾಂಚನಜುಂಗಾ ಪರ್ವತ ಶ್ರೇಣಿಗಳು ಒಬ್ಬ ಅಪೂರ್ವ ಚೆಲುವೆಯ ಬೆಳ್ಳಿಯ ರೇಕಿನ ಸೆರಗಿನ ಅಂಚಿನಂತೆ, ಇಷ್ಟು ನೋಡಿ ಇನ್ನಷ್ಟು ನೋಡುವಷ್ಟರಲ್ಲಿ ಇನ್ನೆಲ್ಲೋ ಮರೆಯಾಗಿಬಿಡುತ್ತಿದ್ದವು. ನಾನಂತೂ ಎಂದಿಗೂ ಕಾಣದ, ಕಂಡಿರದ, ಕಾಂಚನಜುಂಗಾ ಕಂಡರೂ ಅದೇ ಎಂದು ಗುರುತಿಸುವುದು ಹೇಗೆಂದು ಹೋಟೆಲುಗಳಲ್ಲಿ, ಕ್ಯಾಲೆಂಡರುಗಳಲ್ಲಿ ಪೇಂಟಿಂಗ್‌ಗಳಲ್ಲಿ ನಿಜವಾಗಿ ಕಾಣಿಸುವ ಕಾಂಚನಜುಂಗಾ ಹೇಗಿರುತ್ತದೆ ಎಂದು ಹುಡುಕುತ್ತಿದ್ದೆ. ಪೇಂಟಿಂಗುಗಳಲ್ಲಿ ಕಂಡ ಕಾಂಚನಜುಂಗಾ ನೋಡಿದ ಮೇಲೆ ನಾವು ಎಲ್ಲರೂ ಕಂಡಿರುವುದನ್ನೇ ಕಾಣುತ್ತೇವೆಯೇ? ಅಥವಾ ನಾವು ಕಾಣುವುದನ್ನು ಇನ್ನಾರಾದರೂ ಕಂಡಿರಲು ಸಾಧ್ಯವೇ ಎಂಬ ಪ್ರಶ್ನೆಗಳು ಕಾಡತೊಡಗಿದವು.

ಅದೇನೇ ಇರಲಿ, ಮರುದಿನ ಡಾರ್ಜಿಲಿಂಗ್‌ನ ಸುಮಾರು ಏಳು ಸಾವಿರ ಅಡಿ ಎತ್ತರವಿರುವ ಟೈಗರ್ ಹಿಲ್ಸ್ ಮೇಲಿನಿಂದ ಬೆಳ್ಳಂಬೆಳಗ್ಗೆ ನಾಲ್ಕು ಗಂಟೆಯ ಕೊರೆಯುವ ಚಳಿಯಲ್ಲಿ ನೋಡಿದ ಸೂರ್ಯೋದಯ ಜೀವನದ ಅಪೂರ್ವ ಅನುಭವ. ಕೊಡಚಾದ್ರಿಯ ತಪ್ಪಲಿನ ಮೇಲೆ ಕೂತು ಕೆಳಗಿನಿಂದ ನಿಧಾನಕ್ಕೆ ಕತ್ತಲಿನಾಳದಿಂದ ಎದ್ದು ಬರುವ ಕಿತ್ತಳೆಯ ಸೂರ್ಯಗೋಳವನ್ನು ನೋಡುತ್ತಿದ್ದರೆ ನಮ್ಮ ಸುತ್ತಮುತ್ತಲಿರುವ ಕಲ್ಲು ಮಣ್ಣು ಗಿರಿ ಶಿಖರಗಳು ಅರಿವಿಗೆ ಬಂದು, ನಾವು ಹೊಸದೊಂದು ಬೆಳಕಿನ ಪ್ರಪಂಚವೊಂದರಿಂದ ಸುತ್ತುವರಿದಂತೆ ಕಾಣುತ್ತದೆ. ಆದರೆ ಕಾಂಚನಜುಂಗಾದ ಪರಿಯೇ ಬೇರೆ. ಅಲ್ಲೆಲ್ಲೋ ದೂರದಿಂದ ನುಸುಳಿ ಬರುವ ಬೆಳಕಿನ ರೇಖೆಯೊಂದು ಇನ್ನೆಷ್ಟೋ ದೂರದಲ್ಲಿ ಕಾಣುವ ಶಿಖರದ ಮೇಲಿನ ಬಣ್ಣಗಳನ್ನು ನಿಧಾನಕ್ಕೆ ಬದಲಾಯಿಸಲು ಆರಂಭಿಸುತ್ತದೆ. ಬೆಳ್ಮಂಜಿನ ರಾಶಿಯಲ್ಲಿ ಮೊದಲು ಬಿಳಿಯ ಮೊಲಗಳಂತೆ ಹೊರಳಾಡುತ್ತಿರುವ ಮಂಜಿನ ಶಿಖರಗಳು ನಿಧಾನವಾಗಿ ತೆಳುವಾದ ಕಿತ್ತಳೆಯ ಬಣ್ಣಕ್ಕೆ ತಿರುಗುತ್ತ ನಡುವೆ ಹೊಂಗೂದಲಿನ ಚವರಿಯೊಂದು ಹರಿದುಹೋದಂತೆ, ತಾಯಿಯ ನಿಗಾ ತಪ್ಪಿಸಿ ತೆವಳುತ್ತಾ ಕೈಕಾಲುಗಳನ್ನು ಕೊಸರಾಡಿಕೊಂಡು ಹೇಗೆ ಹೇಗೋ ಬಣ್ಣಗಳನ್ನು ಕಲಸಿಕೊಳ್ಳುತ್ತಿರುವ ಮಗುವಿನ ಆಡುಂಬೊಲದಂತೆ ಕಾಂಚನಜುಂಗಾ ಗಿರಿಶಿಖರಶ್ರೇಣಿಗಳು ಕಾಣತೊಡಗುತ್ತವೆ.

ದೂರದ ಪರದೆಯ ಮೇಲೆ ಬದಲಾಗುತ್ತಿರುವ ಕಿತ್ತಳೆ ಹಳದಿ ಬಂಗಾರದ ಬಣ್ಣಗಳ ತೆಳು ಪದರುಗಳ ಕಾಂಚನಜುಂಗಾದ ಸೊಬಗೇ ಇಂತಾದರೆ, ಕೈಲಾಸವನ್ನೇ ಅಡಗಿಸಿಕೊಂಡಿರುವ ಎವರೆಸ್ಟ್‌ನ ವೈಭವ ಇನ್ನಾವ ಬಗೆಯದೋ? ಹಿಮಾಲಯವನ್ನು ಎಲ್ಲೆಲ್ಲಿಂದಲೋ ದೂರದ ನಾಲ್ಕು ದಿಕ್ಕುಗಳಿಂದ ನೋಡಬೇಕೆಂಬ ಆಸೆ ಬಲವಾಗತೊಡಗಿತು.

ಕಾಂಚನಜುಂಗಾದ ಬಣ್ಣಗಳ ಕನಸಿನ ಓಕುಳಿಯನ್ನು ನೋಡಲು ಅಷ್ಟು ಬೆಳಗ್ಗೆಯೇ ನೆರೆದಿದ್ದ ಸಾವಿರಾರು ಜನರು ಎದುರಿಗಿನ ವರ್ಣರಂಜಿತ ದೃಶ್ಯವನ್ನು ನೋಡನೋಡುತ್ತಲೇ ಊರು ಮನೆಗಳಲ್ಲಿರುವ ತಮ್ಮ ಮಕ್ಕಳು ಮರಿ, ನೆಂಟರಿಷ್ಟರೂ ನೋಡಿ ಆನಂದಿಸಲೆಂದು ಅವರಿಗೆ ವಿಡಿಯೊ ಕರೆ ಮಾಡಿ ತೋರಿಸಲು ಪ್ರಯತ್ನಿಸುತ್ತಿದ್ದರು. ತಮ್ಮ ಬದುಕು ಬವಣೆ, ಸುಸ್ತು–ಸಂಸಾರದಲ್ಲಿ ಮುಳುಗಿದ್ದ ಅವರಲ್ಲಿ ಎಷ್ಟೋ ಮಂದಿ ಇವರ ಕರೆಗೆ ಸಿಗದೆ 'ಅಯ್ಯೋ... ಇವರ್ಯಾರೂ ಇನ್ನೂ ಎದ್ದಿಲ್ಲ' ಎಂದು ಶಪಿಸುತ್ತ ಎದುರಿನ ಸೌಂದರ್ಯ ನೋಡಿ ನವೆಯುತ್ತಿದ್ದ ಮಂದಿಯನ್ನು ನೋಡುವಾಗ ಸ್ವಪ್ನದಲ್ಲಿ ಮುಳುಗಿದವರು ಯಾರು,